E-AUCTION SALE NOTICE FOR SALE IMMOVABLE ASSETS, UNDER THE SECURITISATION & RECONSTRUCTION OF FINANCIAL ASSETS & ENFORCEMENT OF SECURITY INTEREST ACT 2002 READ WITH PROVISION TO RULE 8(6) & 6(2) UNDER THE SECURITY INTEREST (ENFORCEMENT) RULES 2002

Notice is hereby given to the public in general and in particular to the Borrower (s) , Guarantor (s), mortgagor(s) that the below described immovable property mortgaged/charged to the Secured Creditor, the Constructive/Physical possession of which has been taken by the Authorized Officer of **Central Bank of India,** the Secured Creditor, will be sold on **"As is where is", "As is what is", and "Whatever there is"** basis on date and time specified herein below, for the recovery of the amount due to the Central bank of India-Secured creditor from the borrower(s) and guarantor(s). The reserve price and the earnest money deposit of the property is mentioned herein below:

Sr No.	Name of the Branch & Account Name	Details of Property Secured Assets and owner of the property	Date of Demand Notice / O/s Dues / Possession Date	Reserve Price / EMD / Bid Increase Amount	Date and time of E-Auction / EMD Remittance Date & Time
1.	**Branch Office : BANGALORE CITY** **M/S. Pearl Express Mr. Ankit Jain**	All that piece and parcel of Residential House property bearing New No. 031,Old Site No 6,formed in Survey No 44/3,situated in 3rd Main,12th A Cross, Sarakki Village, Uttarahalli Hobli, Bangalore South Taluk, presently area comes under the jurisdication of Bruhath Bangalore Mahanagara Palike, Bangalore, PID No 57-241-031 and bounded on : East By : 25 Feet Road (3rd Main Road), West By : Property Belongs to Tirumalaraj, North By : Property Belongs to G Nagaraju, South By : 12th A Cross Road. Measuring : East to west :9.14 metres or 30 feet, North to South : 12.19 metres or 40 feet, In all measuring 111.42 Square meters or 1200 Square Feet. Along with 8 Squares of RCC roofed residential house in the Ground Floor and 8 Squares of RCC roofed residential house in the first floor, mosaic flooring doors and windows are made of ordinary wood having civic amenities and further development thereon. **Owner : Ankith Jain and Sangeetha Jain.**	15.05.2024 / **Rs. 2,29,58,809/- plus further interest and expenses thereon w.e.f 15.05.2024** / Date : 19.11.2024	Reserve Price Rs.1,85,84,000/- / EMD : Rs. 18,58,400/- / Bid Increase Amount Rs. 10,000/-	20.06.2025 10.00 am to 5.00 pm / 20.06.2025 Time: Up to 4.00 P.M.
2.	**Branch Office MYSORE** **Mr. Irfan Pasha S/o Mohammed Peer**	Door No. 47/C, situated at BB Mill Road, Industrial Estate, Old Bannimantap, 'A' Layout, Mandi Mohalla, Mysore and bounded as follows: Boundaries : East By : Power Loom Factory of M.V. Ramaiah, West by : Property of H. D. Rangappa, North By : Drain and Conservancy, South By : BB Mill Road. Residential cum commercial building comprising Cellar, ground and First floor, Ground an extant of Measuring East to West 30.00 Feet, North to South 120.00 Feet, Total extent 3600.00 Sq. Feet.	03.08.2023 / **Rs. 225,41,751/- plus further interest and expenses thereon w.e.f 03/08/2023** / 07.11.2023	Rs.1,15,00,000/- / Rs. 11,50,000/- / Rs. 10,000/-	20.06.2025 10.00 am to 5.00 pm / 20.06.2025 Time: Up to 4.00 P.M.

Notice is hereby given to the public in general and in particular to the Borrower (s) and Guarantor (s) that below described immovable properties mortgaged/charged to the Secured Creditor, the physical possession of which has been taken by the Authorized Officer of Central Bank of India, (Secured Creditor), will be sold on "As is where is", **"As is what is", and "Whatever there is"** (Exclusive of Furniture / Fixture / Stocks / Movables) basis on **20.06.2025** through online web portal (https://EBKRAY.IN),for recovery of below mentioned amount dues to the Central Bank of India, Secured Creditor from the below mentioned Borrowers and Guarantors/Mortgagors. The Reserve Price& EMD and other details are mentioned in below table. For Detailed terms and conditions of the Sale, please refer to the link provided in secured creditor's **web site www.centralbankofindia.co.in**. Last date of deposit of EMD will be **20.06.2025.**

This may also be treated as notice under Rule 8(6) / Rule 9(1) of security (Enforcement) Rules, 2002 to the Borrower/s and Guarantor/s of the said loan about the holding of e-Auction sale on the above date.

For participating in the E-auction sale, the intending bidders should register their details with the service provider **https://ebkray.in/eauction-psb/bidder-registration** well in advance and shall get user ID & password. Intending bidders advised to change only the password. Bidder may visit **https://EBKRAY.IN** for educational videos. For detailed terms & conditions of sale, please refer to the link provided Bank's **website:www.centralbankofindia.co.in.**

Bidder will register on website **https://ebkray.in/eauction-psb/bidder-registration** and upload KYC documents and after verification of KYC documents by the service provider, EMD to be deposited as per the instruction provided on the website (https://EBKRAY.IN).

The highest and successful bidder should pay the 25% of the bid amount (including EMD amount) on the same or next day of auction. EMD amount shall be forfeited, if the successful bidder fails to pay the 25% of the bid amount within the next day of auction. The entire bid amount should be paid within 15 days of the confirmation of sale. Failure to pay the bid amount within the stipulated will lead to forfeiture of the amount already paid.

Sale Certificate shall be issued only in the name/s of the person/s who has/have submitted the bid, not in the name of any other person/s. Successful bidder shall bear the registration costs/stamp duty or any other cost applicable.

The Terms & conditions shall be strictly as per the provisions of the security interest Rules (Enforcement) Rules, 2002.

STATUTORY 15 DAYS SALE NOTICE UNDER RULE 8(6) OF THE SARFAESI ACT, 2002

The borrower/guarantors are hereby notified to pay the sum as mentioned above along with up to date interest and ancillary expenses before the date of e-auction failing which the property will be auctioned /sold and balance dues, if any, will be recovered with interest and cost.

Date: 02.06.2025
Place : Bengaluru And Mysore

Sd/- Authorised Officer / Chief Manager
Central Bank of India

ಹೇಮಾವತಿ ಲಿಂಕ್ ಕೆನಾಲ್ ಯೋಜನೆ ವಿರುದ್ಧದ ಪ್ರತಿಭಟನೆ ರಾಜಕೀಯ ಪ್ರೇರಿತ: ಡಿ.ಕೆ.ಶಿವಕುಮಾರ್

ಬೆಂಗಳೂರು, ಜೂ.2: ಹೇಮಾವತಿ ಲಿಂಕ್ ಕೆನಾಲ್ ವಿರುದ್ಧ ಹೋರಾಟಗಾರರ ಬ್ಲ್ಯಾಕ್ ಮೇಲ್, ಡಿಮ್ಯಾಂಡ್ ಏನೆಂಬುದನ್ನು ಸಮಯ ಬಂದಾಗ ಬಹಿರಂಗಪಡಿಸುವೆ. ಬೆಂಗಳೂರು ದಕ್ಷಿಣ ಜಿಲ್ಲೆಗೆ ನೀರು ಕೊಂಡೊಯ್ಯಲಾಗುತ್ತಿದೆ ಎಂಬುದು ಸುಳ್ಳು. ಹತ್ತು ವರ್ಷದಲ್ಲಿ ಕುಣಿಗಲ್ ಪಾಲಿನ ನೀರಿನಲ್ಲಿ ಶೇ.90ರಷ್ಟು ಬಳಕೆಯಾಗದೆ ಅಲ್ಲಿನ ಜನರಿಗೆ ಅನ್ಯಾಯವಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಸೋಮವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ದಕ್ಷಿಣ ಜಿಲ್ಲೆಗೆ ಹೇಮಾವತಿ ನೀರಿನ ಅಗತ್ಯವಿಲ್ಲ. ಹೇಮಾವತಿ ಲಿಂಕ್ ಕೆನಾಲ್ ಯೋಜನೆ ವಿರೋಧಿಸುತ್ತಿರುವುದು ಕೇವಲ ರಾಜಕಾರಣಕ್ಕಾಗಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಈ ಯೋಜನೆಗೆ ಅನುಮೋದನೆ ನೀಡಲಾಯಿತು ಎಂದು ಹೇಳಿದರು.

ಯಡಿಯೂರಪ್ಪ ಮುಖ್ಯಮಂತ್ರಿ ಆದಾಗ ಆಗಿನ ಜಿಲ್ಲಾ ಉಸ್ತುವಾರಿ ಸಚಿವ ಮಾಧುಸ್ವಾಮಿ ಸೇರಿ ಈ ಯೋಜನೆ ತಡೆ ಹಿಡಿದಿದ್ದರು. ಆರಂಭದಲ್ಲಿ ಈ ಯೋಜನೆ ವೆಚ್ಚ 600 ಕೋಟಿ ರೂ. ಇತ್ತು. ಈಗ ಅದು 1,000 ಕೋಟಿ ರೂ.ಗೆ ಏರಿಕೆಯಾಗಿದೆ. ಈ ವಿಚಾರದಲ್ಲಿ ಬಿಜೆಪಿ ಶಾಸಕರಿಗೆ ಅಸೂಯೆ ಅಷ್ಟೇ ಎಂದು ಅವರು ಆರೋಪಿಸಿದರು.

10-12 ವರ್ಷಗಳಿಂದ ಕುಣಿಗಲ್ ತಾಲೂಕಿಗೆ ಅದರ ಪಾಲಿನ ನೀರು ತಲುಪಿಲ್ಲ. ಕುಣಿಗಲ್ ತಾಲೂಕಿನ ಜನರಿಗೆ ಶೇ.92ರಷ್ಟು ನೀರು ನಷ್ಟವಾಗಿದೆ. 10 ವರ್ಷಗಳಲ್ಲಿ ಶೇ.10ರಷ್ಟು ನೀರು ಕೂಡ ಹೋಗಿಲ್ಲ. ಹೀಗಾಗಿ ನಾವು ಈ ಯೋಜನೆ ಕೈಗೊಂಡಿದ್ದೇವೆ ಎಂದು ಶಿವಕುಮಾರ್ ತಿಳಿಸಿದರು.

ಈ ಯೋಜನೆಯಿಂದ ಯಾರಿಗೂ ಅನ್ಯಾಯ ಆಗುವುದಿಲ್ಲ. ಈ ನೀರನ್ನು ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಗೆ ತೆಗೆದುಕೊಂಡು ಹೋಗಲಾಗುವುದು ಎಂದು ಹೇಳುತ್ತಿದ್ದಾರೆ. ರಾಮನಗರಕ್ಕೆ ಇದರ ಅಗತ್ಯವಿಲ್ಲ. ಈ ಜಿಲ್ಲೆಗಾಗಿ ಪ್ರತ್ಯೇಕ ನೀರಾವರಿ ಯೋಜನೆ ರೂಪಿಸಲಾಗಿದೆ. ಹೀಗಾಗಿ ರಾಮನಗರಕ್ಕೆ ಸಾಕಷ್ಟು ನೀರಿದೆ ಎಂದು ಅವರು ಸ್ಪಷ್ಟಪಡಿಸಿದರು.

ತುಮಕೂರು ಜಿಲ್ಲೆಯ ಕೆಲವು ಭಾಗಗಳು ಕೃಷ್ಣಾ ವ್ಯಾಪ್ತಿಯಿಂದ ನೀರು ಪಡೆಯುತ್ತಿದೆ. ಕಾವೇರಿ, ಕೃಷ್ಣಾ ನದಿಗಳಿಂದ ತುಮಕೂರಿನ ಕೆಲವು ಭಾಗಗಳಿಗೆ ನೀರು ಪೂರೈಸಿಲ್ಲವೇ?. ನಾನು ಸಚಿವನಾದ ಬಳಿಕ ಕಾವೇರಿಯಲ್ಲಿರುವ ಬಾಕಿ 6 ಟಿಎಂಸಿ ನೀರನ್ನು ಬೆಂಗಳೂರಿನ ಬಳಕೆಗೆ ಆದೇಶ ಹೊರಡಿಸಿದ್ದೇನೆ ಎಂದು ಶಿವಕುಮಾರ್ ಹೇಳಿದರು.

ಹೇಮಾವತಿ ನೀರಿನಲ್ಲಿ ಕುಣಿಗಲ್ ತಾಲೂಕಿಗೆ 3.3 ಟಿಎಂಸಿ ನೀರು ಪಾಲು ಸಿಕ್ಕಿದ್ದು, ನಾವಿಲ್ಲಿ ಅಂತರ್‌ರಾಜ್ಯ ಸಂಘರ್ಷ ಮಾಡುತ್ತಿದ್ದೇವೆಯೇ? ಇಲ್ಲವಲ್ಲ. ಇದೇ ಕೃಷ್ಣಪ್ಪ ಹಾಗೂ ಸುರೇಶ್ ಗೌಡ ತಾಂತ್ರಿಕ ಸಮಿತಿ ರಚಿಸುವಂತೆ ಕೇಳಿದರು. ತಾಂತ್ರಿಕ ಸಮಿತಿ ರಚನೆಯಾಗಿ ಅದರ ವರದಿಯೂ ಬಂದಿದೆ. ಈಗ ರೈತರನ್ನು ಕರೆದುಕೊಂಡು ಹೋಗಿ ಅಡಚಣೆ ಮಾಡುತ್ತಿದ್ದಾರೆ ಎಂದು ಹೇಳಿದರು.

> ನಾವು ಎತ್ತಿನಹೊಳೆ ಯೋಜನೆಯಿಂದ ತುಮಕೂರಿನ ಹಲವು ಕೆರೆಗಳನ್ನು ತುಂಬಿಸುತ್ತಿಲ್ಲವೇ?. ಈ ಯೋಜನೆ ಆರಂಭವಾಗಿದ್ದು ಕೇವಲ ಕೋಲಾರ ಹಾಗೂ ಚಿಕ್ಕಬಳ್ಳಾಪುರಕ್ಕೆ ಮಾತ್ರ ನೀರು ಪೂರೈಸಲು. ಆದರೆ ತುಮಕೂರಿಗೂ ನೀರು ನೀಡುತ್ತಿಲ್ಲವೇ? ಇದು ಜನರಿಗೆ ಅರ್ಥವಾಗುತ್ತದೆ. ಆದರೆ ಬ್ಲ್ಯಾಕ್ ಮೇಲ್ ಮಾಡುವ ಹೋರಾಟಗಾರರಿಗೆ ಅರ್ಥ ಆಗುವುದಿಲ್ಲ.
>
> **-ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

ಕಾರ್ಯಕರ್ತರಿಂದ ಅಹವಾಲು ಸ್ವೀಕರಿಸಿದ ಲಕ್ಷ್ಮೀ ಹೆಬ್ಬಾಳ್ಕರ್

ಬೆಂಗಳೂರು, ಜೂ.2: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸರಕಾರ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಬಲಿಷ್ಠವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.

ಸೋಮವಾರ ನಗರದ ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯಲ್ಲಿ ಕಾರ್ಯಕರ್ತರಿಂದ ಅಹವಾಲು ಸ್ವೀಕರಿಸಿದ ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಕಚೇರಿ ಕಾರ್ಯಕರ್ತರ ಪಾಲಿಗೆ ದೇವಾಲಯ ಇದ್ದಂತೆ ಎಂದರು.

ಸಾಮಾನ್ಯ ಕಾರ್ಯಕರ್ತೆಯಾಗಿ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡೆ. ಇಂದು ಇಡೀ ಕ್ಯಾಬಿನೆಟ್‌ನಲ್ಲಿ ಒಬ್ಬಳೇ ಮಹಿಳಾ ಮಂತ್ರಿಯಾಗಿರುವೆ. ಎರಡು ಬಾರಿ ಚುನಾವಣೆಯಲ್ಲಿ ಸೋತರೂ ಮತ್ತೆ ನನಗೆ ಚುನಾವಣೆಯಲ್ಲಿ ನಿಲ್ಲಲು ಅವಕಾಶ ಮಾಡಿಕೊಟ್ಟ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರಿಗೆ ಋಣಿಯಾಗಿರುವೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬೆಂಗಳೂರು ಪೂರ್ವ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ನಂದಕುಮಾರ್, ಬಾಲಭವನದ ಅಧ್ಯಕ್ಷ ಬಿ.ಆರ್.ನಾಯ್ಡು, ಉಪಾಧ್ಯಕ್ಷೆ ಅಕ್ಕೈ ಪದ್ಮಶಾಲಿ, ಕಾಂಗ್ರೆಸ್ ಮುಖಂಡರಾದ ಪ್ರಭಾಕರ್ ಗೌಡ, ಸುಧೀಂದ್ರ, ನಟರಾಜ್ ಗೌಡ, ಕಮಲಾಕ್ಷಿ ರಾಜಣ್ಣ, ದೀಪಕ್ ತಿಮ್ಮಯ್ಯ, ಅಮರೇಶ್ ಪಾಪಣ್ಣ, ಪಲ್ಲವಿ, ಇತರರು ಉಪಸ್ಥಿತರಿದ್ದರು.

ಪುಸ್ತಕ ಬಹುಮಾನಕ್ಕಾಗಿ ಕೃತಿಗಳ ಆಹ್ವಾನ

ಬೆಂಗಳೂರು, ಜೂ.2: ಕರ್ನಾಟಕ ಸಾಹಿತ್ಯ ಅಕಾಡಮಿಯು 2024ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಿದೆ.

ಬಹುಮಾನಕ್ಕೆ ಸಲ್ಲಿಸುವ ಕೃತಿಗಳು 2024ರ ಜ.1ರಿಂದ 2024ರ ಡಿ.31ರೊಳಗೆ ಪ್ರಥಮ ಆವೃತ್ತಿಯಾಗಿ ಪ್ರಕಟವಾಗಿರುವ ಕೃತಿಗಳಾಗಿರಬೇಕು. ಕೃತಿಯಲ್ಲಿ ಪ್ರಥಮ ಮುದ್ರಣ 2024 ಎಂದು ಮುದ್ರಿತವಾಗಿರಬೇಕು.

ಲೇಖಕರು/ ಪ್ರಕಾಶಕರು/ ಸಾಹಿತ್ಯಾಸಕ್ತ ಸಾರ್ವಜನಿಕರು ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560 002 ಈ ವಿಳಾಸಕ್ಕೆ ರಿಜಿಸ್ಟರ್ಡ್ ಅಂಚೆ ಅಥವಾ ಕೊರಿಯರ್ ಮೂಲಕ ಅಥವಾ ಖುದ್ದಾಗಿ 2025ರ ಜು.15ರೊಳಗೆ ತಲುಪುವಂತೆ ಕಳುಹಿಸಬೇಕು. ಬಹುಮಾನಕ್ಕಾಗಿ ಕಳುಹಿಸುವ ಕೃತಿಯ ಮೇಲೆ ಯಾವ ಪ್ರಕಾರಗಳಲ್ಲಿ ಯಾವ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಪುಸ್ತಕದ ಶೀರ್ಷಿಕೆ ಪುಟದಲ್ಲಿ ಬರೆದಿರಬೇಕು.

ಹೆಚ್ಚಿನ ಮಾಹಿತಿಗಾಗಿ ಅಕಾಡಮಿಯ ವೆಬ್‌ಸೈಟ್ www.sahithyaacademy.karnataka.gov.in ಅನ್ನು ಸಂಪರ್ಕಿಸಬಹುದು ಎಂದು ಸಾಹಿತ್ಯ ಅಕಾಡಮಿಯ ರಿಜಿಸ್ಟ್ರಾರ್ ಕರಿಯಪ್ಪ ಎನ್.ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಬೂಕರ್ ಪ್ರಶಸ್ತಿ ಪುರಸ್ಕೃತರೊಂದಿಗೆ ನಾಳೆ ಸಂವಾದ ಕಾರ್ಯಕ್ರಮ

ಬೆಂಗಳೂರು, ಜೂ.2: ಕರ್ನಾಟಕ ಮಾಧ್ಯಮ ಅಕಾಡಮಿ ಹಾಗೂ ಬೆಂಗಳೂರು ಪ್ರೆಸ್‌ಕ್ಲಬ್ ವತಿಯಿಂದ ಜೂ.4ರಂದು ಬೆಳಗ್ಗೆ 11 ಗಂಟೆಗೆ ನಗರದ ಪ್ರೆಸ್ ಕ್ಲಬ್ ಆವರಣದಲ್ಲಿ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಹಾಗೂ ದೀಪಾ ಭಾಸ್ತಿ ಅವರೊಂದಿಗೆ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಮಾಧ್ಯಮ ಅಕಾಡಮಿಯ ಅಧ್ಯಕ್ಷೆ ಆಯೇಷಾ ಖಾನಂ, ಹಿರಿಯ ಪತ್ರಕರ್ತ ದಿನೇಶ್ ಅಮಿನ್ ಮಟ್ಟು, ಪ್ರೆಸ್‌ಕ್ಲಬ್ ಅಧ್ಯಕ್ಷ ಶ್ರೀಧರ್ ಮತ್ತು ಪ್ರಧಾನ ಕಾರ್ಯದರ್ಶಿ ಶಿವಕುಮಾರ ಬೆಳ್ಳಿತಟ್ಟೆ ಸಹಿತ ಹಲವರು ಭಾಗವಹಿಸಲಿದ್ದಾರೆ ಎಂದು ಪ್ರಕಟನೆ ತಿಳಿಸಿದೆ.

ಇಂದಿನಿಂದ ಭೂ ಸಂಪನ್ಮೂಲ ಸಮೀಕ್ಷೆ ಆಧಾರಿತ ಸುಸ್ಥಿರ ಜಲಾನಯನ ನಿರ್ವಹಣೆ ಕುರಿತ ರಾಷ್ಟ್ರೀಯ ಸಮ್ಮೇಳನ

ಬೆಂಗಳೂರು, ಜೂ.2: ಭೂ ಸಂಪನ್ಮೂಲ ಸಮೀಕ್ಷೆ ಆಧಾರಿತ ಸುಸ್ಥಿರ ಜಲಾನಯನ ನಿರ್ವಹಣೆ ಕುರಿತ ರಾಷ್ಟ್ರೀಯ ಸಮ್ಮೇಳನದ ಸಮಾವೇಶ ಜೂ.3ರಿಂದ 5ರವರೆಗೆ ಜಿಕೆವಿಕೆ ಆವರಣದಲ್ಲಿರುವ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರ್‌ರಾಷ್ಟ್ರೀಯ ಸಮ್ಮೇಳನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ಮಾಹಿತಿ ನೀಡಿದ್ದಾರೆ.

ಸೋಮವಾರ ಜಿಕೆವಿಕೆಯ ಜಲಾನಯನ ನಿರ್ವಹಣೆಯ ಉತ್ಕೃಷ್ಟ ಕೇಂದ್ರದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ 25 ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದ್ದು, ಸುಮಾರು 34 ಲಕ್ಷ ಹೆಕ್ಟೇರ್ ಪ್ರದೇಶವನ್ನು ನವೀನ ವಿಧಾನಗಳಿಂದ ಪುನಶ್ಚೇತಗೊಳಿಸಿ ಕೃಷಿಯಲ್ಲಿ ಸ್ಥಿತಿಸ್ಥಾಪಕತ್ವ ಸಾಧಿಸುವ ನಿಟ್ಟಿನಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜಲಾನಯನ ಅಭಿವೃದ್ಧಿ ಉತ್ಕೃಷ್ಟತಾ ಕೇಂದ್ರ ವಿಶೇಷಾಧಿಕಾರಿ ಡಾ.ಎನ್.ಬಿ.ಪ್ರಕಾಶ್, ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕ ಮುಹಮ್ಮದ್ ಪರ್ವೇಝ್ ಬಂತನಾಳ್, ಉಪಕೃಷಿ ನಿರ್ದೇಶಕಿ ಗೀತಾ ಹಳ್ಳಿ ಉಪಸ್ಥಿತರಿದ್ದರು.

ನಾಳೆ ಮಹಿಳಾ ಉದ್ಯಮಿ ಸಾಧಕರಿಗೆ 'ವಾವ್' ಪ್ರಶಸ್ತಿ ಪ್ರದಾನ

ಸಿಎಂ ಸಿದ್ದರಾಮಯ್ಯರಿಗೆ ಆಹ್ವಾನ

ಬೆಂಗಳೂರು, ಜೂ.2: ಮಹಿಳಾ ಉದ್ಯಮಿಗಳಾಗಬಯಸುವವರಿಗೆ ಸಲಹೆ, ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರ, ಆರ್ಥಿಕ ಬೆಂಬಲವನ್ನು ನೀಡುತ್ತಾ ಭಾರತದಾದ್ಯಂತ ಮಹಿಳಾ ಉದ್ಯಮಿಗಳಿಗೆ ಕ್ರಿಯಾತ್ಮಕ ವೇದಿಕೆಯನ್ನು ಕಲ್ಪಿಸುತ್ತಿರುವ 'ಉಬುಂಟು' ಮಹಿಳಾ ನಿಯೋಗವು ಜೂ.4ರಂದು ಬೆಂಗಳೂರಿನ ಖಾಸಗಿ ಹೊಟೇಲ್‌ನಲ್ಲಿ ನಡೆಯಲಿರುವ 'ವುಮೆನ್ ಆಫ್ ವರ್ತ್(ವಾವ್)' ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಆಹ್ವಾನಿಸಿತು.

ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ 'ಉಬುಂಟು' ಸಂಸ್ಥಾಪಕಿ ಕೆ. ರತ್ನಪ್ರಭಾ ನೇತೃತ್ವದ ನಿಯೋಗವು ಸಿಎಂ ಅವರನ್ನು ಆಹ್ವಾನಿಸಿತು. ಈ ಕಾರ್ಯಕ್ರಮದಲ್ಲಿ ಜೆಮ್ ಪೋರ್ಟಲ್ ಅನ್ನು ಲಾಂಚ್ ಮಾಡಲಾಗುತ್ತಿದೆ. ಕಾರ್ಯಾಗಾರವನ್ನು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಉದ್ಘಾಟಿಸಲಿದ್ದು, ಸಾರ್ವಜನಿಕ ಉದ್ಯಮಗಳ ಖಾತೆಯ ಸಚಿವ ಶರಣಬಸಪ್ಪ ದರ್ಶನಾಪುರ ಪಾಲ್ಗೊಳ್ಳಲಿದ್ದಾರೆ. ಗೋವಾ, ಮಹಾರಾಷ್ಟ್ರ, ಮಧ್ಯಪ್ರದೇಶ, ಅಸ್ಸಾಂ ಮತ್ತು ಇನ್ನೂ ಹಲವು ರಾಜ್ಯಗಳಿಂದ ಮಹಿಳಾ ಉದ್ಯಮಿಗಳು ಭಾಗವಹಿಸಲಿದ್ದಾರೆ ಎಂದು ಪ್ರಕಟನೆ ತಿಳಿಸಿದೆ.

ಕರ್ನಾಟಕ ಸರ್ಕಾರ
ಕರ್ನಾಟಕ ಸರ್ಕಾರದ ಸಚಿವಾಲಯ
ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಸಂಖ್ಯೆ: ಇ-ಕಂಇ 73 ಜಿಆರ್‌ಸಿ 2024 ದಿನಾಂಕ: 18.03.2025

ಅಧಿಸೂಚನೆ

ಆರಕ್ಷಕ ಉಪನಿರೀಕ್ಷಕರು, ಸರಗೂರು ಪೋಲೀಸ್ ಠಾಣೆ, ಸರಗೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ವರದಿಗಳನ್ನು ಪರಿಗಣಿಸಿದ ತರುವಾಯ ಹಾಗೂ ಠೇವಣಿದಾರರ ದೂರುಗಳ ಬಗ್ಗೆ ಯುಕ್ತ ತನಿಖೆಯ ತರುವಾಯ ಎನ್.ಎಸ್.ಆರ್.ಎಲ್ ಬಿಸಿನೆಸ್ ಸಲ್ಯೂಶನ್ ಪ್ರೈವೇಟ್ ಲಿಮಿಟೆಡ್, ಮೈಸೂರು, ದೂಷಿತ ಕಂಪನಿಯು ಗುಟ್ಟಾಗಿ ಹಾಗೂ ಕಾನೂನುಬಾಹಿರವಾಗಿ ಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ಆ ತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದ ಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದು ಹಾಗೂ ಅವರಿಗೆ ಆಶ್ವಾಸನೆ ನೀಡಿದ ಸೇವೆಗಳನ್ನು ಒದಗಿಸಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಎನ್.ಎಸ್.ಆರ್.ಎಲ್ ಬಿಸಿನೆಸ್ ಸಲ್ಯೂಶನ್ ಪ್ರೈವೇಟ್ ಲಿಮಿಟೆಡ್, ಮೈಸೂರು, ದೂಷಿತ ಕಂಪನಿಯು ಹಾಗೂ ಅವರ ಸಹವರ್ತಿ ಜನರು ಠೇವಣಿದಾರರಿಂದ ಅಥವಾ ಫಿರ್ಯಾದುದಾರರಿಂದ ಸಂಗ್ರಹಿಸಲಾದ ಹಣದಿಂದ ಜಮೀನು, ಚರ ಹಾಗೂ ಸ್ಥಿರಾಸ್ತಿಗಳನ್ನು, ನಗದು ಹಾಗೂ ಇತರೆ ವಸ್ತುಗಳನ್ನು ಅರ್ಜಿಸಿರುವುದು ಹಾಗೂ ಆ ಮೂಲಕ ಠೇವಣಿ ಹಾಗೂ ಹಣವನ್ನು ಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಎನ್.ಎಸ್.ಆರ್.ಎಲ್ ಬಿಸಿನೆಸ್ ಸಲ್ಯೂಶನ್ ಪ್ರೈವೇಟ್ ಲಿಮಿಟೆಡ್, ಮೈಸೂರು, ದೂಷಿತ ಕಂಪನಿಯು ಹಾಗೂ ಅವರ ಸಹವರ್ತಿ ಜನರು ಇವರ ಕೃತ್ಯಗಳು ಮುಗ್ಧ ಜನರಿಗೆ ವಂಚಿಸುವ ಉದ್ದೇಶದಿಂದ ಠೇವಣಿದಾರರ ಅಥವಾ ಫಿರ್ಯಾದುದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ನಂಬಲು ಸರ್ಕಾರವು ಕಾರಣಗಳನ್ನು ಹೊಂದಿದ್ದು, ಎನ್.ಎಸ್.ಆರ್.ಎಲ್ ಬಿಸಿನೆಸ್ ಸಲ್ಯೂಶನ್ ಪ್ರೈವೇಟ್ ಲಿಮಿಟೆಡ್, ಮೈಸೂರು, ದೂಷಿತ ಕಂಪನಿಯ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯವಾಗಿರುತ್ತದೆ.

ಆದ್ದರಿಂದ, ಆರಕ್ಷಕ ಉಪನಿರೀಕ್ಷಕರು, ಸರಗೂರು ಪೋಲೀಸ್ ಠಾಣೆ, ಸರಗೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ವರದಿಗಳನ್ನು ಪರಿಗಣಿಸಿ ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಿದೆ ಎಂದು ಸ್ವಯಂ ಮನವರಿಕೆ ಮಾಡಿಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004(2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ಆದೇಶವನ್ನು ಮಾಡುತ್ತದೆ:

"ಆದೇಶ"

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಮೇಲ್ಕಂಡ ಸನ್ನಿವೇಶಗಳ ಹಿನ್ನಲೆಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಎನ್.ಎಸ್.ಆರ್.ಎಲ್ ಬಿಸಿನೆಸ್ ಸಲ್ಯೂಶನ್ ಪ್ರೈವೇಟ್ ಲಿಮಿಟೆಡ್, ಮೈಸೂರು ಗೆ ಸೇರಿದೆ ಎನ್ನಲಾದ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಮುಟ್ಟು ಗೋಲು ಹಾಕಿ ಕೊಳ್ಳುವುದು ಅವಶ್ಯಕವಾಗಿದೆ ಎಂದು ಮನಗಂಡಿರುವುದರಿಂದ, ಸದರಿ ಹಣಕಾಸು ಸಂಸ್ಥೆಯ ಅಂಥ ಹಣ ಅಥವಾ ಅಂಥ ಇತರೆ ಸ್ವತ್ತುಗಳು ಅಥವಾ ಸಂಸ್ಥೆಯ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದಸ್ಯರ ಅಥವಾ ಯಾರೇ ಇತರೆ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು ಠೇವಣಿಗಳನ್ನು, ಬಡ್ಡಿ ಅಥವಾ ಇತರೆ ಖಾತ್ರಿ ಪ್ರಯೋಜನಗಳನ್ನು ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಪ್ರಯಾಪ್ತವಾಗಿಲ್ಲವೆಂದು ಗೊತ್ತಾದಲ್ಲಿ ಎನ್.ಎಸ್.ಆರ್.ಎಲ್ ಬಿಸಿನೆಸ್ ಸಲ್ಯೂಶನ್ ಪ್ರೈವೇಟ್ ಲಿಮಿಟೆಡ್, ಮೈಸೂರು ಸಂಗ್ರಹಿಸಲಾದ ಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಅರ್ಜಿಸಿದೆ ಎನ್ನಲಾದ ಈ ಆದೇಶದ ಅನುಬಂಧಕ್ಕೆ ನಿರ್ದಿಷ್ಟಪಡಿಸಲಾದಂತೆ ಎಲ್ಲಾ ಚರಾ ಸ್ವತ್ತುಗಳನ್ನು ಸರ್ಕಾರವು ಈ ಮೂಲಕ ಜಪ್ತಿ ಮಾಡಿಕೊಳ್ಳುತ್ತದೆ.

ಟಿಪ್ಪಣಿ: ವಿಶೇಷ ನ್ಯಾಯಾಲಯದ ಮುಂದಿನ ಆದೇಶದವರೆಗೆ ಬಾಕಿ ಇರಿಸಿ, ಮೇಲೆ ಹೇಳಿದ ಚರ ಸ್ವತ್ತುಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಈ ಆದೇಶವು ಪ್ರಕಟಣೆಗೊಂಡ ದಿನಾಂಕದಿಂದ ಸರ್ಕಾರವು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರದಲ್ಲಿ ಕೂಡಲೇ ನಿಯುತವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/-
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು- 1
ಭೂಮಾಪನ & ವಿಶೇಷ ಕೋಶ)

ಅನುಬಂಧ

Sl. No.	Description of the Sized Movable Items found in NSRL Business Solutions Private Limited, Mysore Fraudulent Company Office/Shop and Store Room.	Evaluated Amount. in Rs.
1	House Hold and Grocery Items seized at Shop No.01	12,270/-
2	House Hold and Grocery Items seized at Shop No.02	36,456/-
3	House Hold and Grocery Items seized at NSRL Business Solutions Private Limited, Mysore Fraudulent Company Office (Hall)	1,23,220/-
4	House Hold and Grocery Items seized at NSRL Business Solutions Private Limited, Mysore Fraudulent Company Office (Meeting Hall)	18,037/-
5	House Hold and Grocery Items seized at Store Room	1,41,400/-
	Total	3,31,383/-

ಸಹಿ/-
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-1,
ಭೂಮಾಪನ ಮತ್ತು ವಿಶೇಷ ಕೋಶ)

ವಾಸಾಸಂಇ/ವಾಪ್ರ/1013/2025-26

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:10ಇ:2025-26:ಜೆಇ-2 ದಿನಾಂಕ: 31.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೆಕ್ಕಶೀರ್ಷಿಕೆ: 4059-80-051-0-29-386 ಇಲಾಖಾ ಕಟ್ಟಡಗಳು ರಡಿ ಇಂಡೆಂಟ್ ನಂ.18228, ಈ ಕಾಮಗಾರಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 17.06.2025 (ಅಪರಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.

ಕೆ.ಡಬ್ಲ್ಯೂ-4 ಬಿಡ್ ಡೊಕ್ಯೂಮೆಂಟ್ ಪ್ರಕಾರ ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳ ಅಂದಾಜು ಮೊತ್ತ ರೂ.400.00 ಲಕ್ಷ ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ https://kppp.kamataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

DIPR/MNG/KSMCA/244/25-26 dt.02.06.2025 ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

ಜಿಎಚ್‌ವಿ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್
(ಈ ಮೊದಲು ಸಿಂಧು ವ್ಯಾಲಿ ಟೆಕ್ನಾಲಜೀಸ್ ಲಿಮಿಟೆಡ್ ಎಂದು ಕರೆಯಲ್ಪಡುತ್ತಿತ್ತು)
CIN : L43900KA1976PLC173212
ನೋಂದಾಯಿತ ವಿಳಾಸ: ನಂ. 3, 2ನೇ ಮಹಡಿ, ಡಾ.ಟಿಸಿಎಂ ರಾಯನ್ ರಸ್ತೆ, ಅಯ್ಯಪ್ಪ ಟೆಂಪಲ್ ಎದುರು, ಬೆಂಗಳೂರು, ಕರ್ನಾಟಕ- 560053
ಕಾರ್ಪೋರೇಟ್ ಕಚೇರಿ: ಕನಾಕಿಯಾ ವಾಲ್ ಸ್ಟ್ರೀಟ್- 511/512, 5ನೇ ಮಹಡಿ, ಅಂಧೇರಿ ಕುರ್ಲಾ ರಸ್ತೆ, ಚಕಲ, ಅಂಧೇರಿಪೂರ್ವ, ಮುಂಬೈ 59
Telephone: +91 22 6725 0014, Website: www.ghvinfra.com, Email: info@ghvinfra.com.

ಸಾರ್ವಜನಿಕ ನೋಟಿಸ್- ಕಂಪನಿಯ ವಿಶೇಷ ಸಾಮಾನ್ಯ ಸಭೆ ವಿಡಿಯೊ ಕಾನ್ಫರೆನ್ಸಿಂಗ್ (ವಿಸಿ)/ಇತರ ದೃಶ್ಯಶ್ರವ್ಯ ಮಾಧ್ಯಮದ (ಓವಿಎಂ) ಮೂಲಕ ನಡೆಯಲಿದೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕಂಪನಿಗಳ ಕಾಯ್ದೆ-2013ರ ನಿಬಂಧನೆಗಳು ಮತ್ತು ಅದರಡಿ ರೂಪಿಸಿರುವ ನಿಯಮಗಳು ಹಾಗೂ ದಿನಾಂಕ ಏಪ್ರಿಲ್ 13, 2020, ಜೂನ್ 15, 2020, ಸೆಪ್ಟೆಂಬರ್ 28, 2020, ಡಿಸೆಂಬರ್ 31, 2020 ಮತ್ತು ಜೂನ್ 23, 2021, ಡಿಸೆಂಬರ್ 28, 2022 ಮತ್ತು ಅಕ್ಟೋಬರ್ 18, 2024ರಂದು ಹೊರಡಿಸಿದ ಸಾಮಾನ್ಯ ಸುತ್ತೋಲೆ ಮತ್ತು ದಿನಾಂಕ ಮೇ 12, 2020, ಜನವರಿ 15, 2021 ಮತ್ತು ಅಕ್ಟೋಬರ್ 03, 2024ರಂದು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಹೊರಡಿಸಿದ ಸೆಬಿ ಸುತ್ತೋಲೆಗಳ (ಸೆಬಿ ಸುತ್ತೋಲೆಗಳು) ಅನುಸಾರ ಇಜಿಎಂ ಆಯೋಜಿಸುವ ಸಂಬಂಧ ನೀಡಿದ ನೋಟಿಸ್‌ನಲ್ಲಿ ನಿಗದಿಪಡಿಸಿರುವ ನಡಾವಳಿಗಳನ್ನು ನಿರ್ವಹಿಸುವ ಸಲುವಾಗಿ ಜಿಎಚ್‌ವಿ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್ (ಈ ಮೊದಲು ಸಿಂಧು ವ್ಯಾಲಿ ಟೆಕ್ನಾಲಜೀಸ್ ಲಿಮಿಟೆಡ್ ಎಂದು ಕರೆಯಲ್ಪಡುತ್ತಿತ್ತು) (ಕಂಪನಿ) ನ ಸದಸ್ಯರ ವಿಶೇಷ ಸಾಮಾನ್ಯಸಭೆ ಶನಿವಾರ, ಜೂನ್ 28, 2025ರಂದು ಮಧ್ಯಾಹ್ನ 3.00 ಗಂಟೆಗೆ (ಐಎಸ್‌ಟಿ) ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರೀಸ್ ಲಿಮಿಟೆಡ್ (ಎನ್‌ಎಸ್‌ಡಿಎಲ್) ಒದಗಿಸಿರುವ ವಿಡಿಯೊ ಕಾನ್ಫರೆನ್ಸಿಂಗ್ (ವಿಸಿ)/ ಇತರ ದೃಶ್ಯ-ಶ್ರವ್ಯ ಮಾಧ್ಯಮ (ಓಎವಿಎಂ) ಮೂಲಕ, ಸದಸ್ಯರ ಭೌತಿಕ ಹಾಜರಾತಿ ಒಂದು ಸಾಮಾನ್ಯ ಸ್ಥಳದಲ್ಲಿ ಇಲ್ಲದೇ ನಡೆಯಲಿದೆ.

2025-26ನೇ ಸಾಲಿನ ಇಜಿಎಂ ನೋಟಿಸ್ ಅನ್ನು ಎಲೆಕ್ಟ್ರಾನಿಕ್ ವಿಧಾನದ ಮೂಲಕ ಕಂಪನಿಯ ಬಳಿ ಅಥವಾ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ ಬಳಿ ತಮ್ಮ ಇ-ಮೇಲ್ ಐಡಿಗಳನ್ನು ನೋಂದಾಯಿಸಿರುವ, ಯಾರ ಹೆಸರು ಡಿಪಾಸಿಟರೀಸ್ ನಿರ್ವಹಿಸುವ ರಿಜಿಸ್ಟರ್ ಆಫ್ ಮೆಂಬರ್ಸ್/ ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ನಿಗದಿತ ಗಡುವಿನ ದಿನಾಂಕ ಅಂದರೆ ಶುಕ್ರವಾರ ಮೇ 30, 2024ಕ್ಕೆ ಹೆಸರು ಇರುವ ಎಲ್ಲ ಷೇರುದಾರರಿಗೆ ಕಳುಹಿಸಲಾಗುವುದು. ಸದಸ್ಯರು ಇಜಿಎಂಗೆ ವಿಸಿ/ಓವಿಎಂ ಸೌಲಭ್ಯದ ಮೂಲಕ ಮಾತ್ರವೇ ಸೇರಿಕೊಳ್ಳಲು, ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ಇಜಿಎಂ ಸೇರಿಕೊಳ್ಳುವ ಸೂಚನೆಗಳನ್ನು, ಮತ್ತು ರಿಮೋಟ್ ಇ-ಮತದಾನ ವ್ಯವಸ್ಥೆ ಅಥವಾ ಇಜಿಎಂ ನಡೆಯುವ ವೇಳೆ ತಮ್ಮ ಮತಗಳನ್ನು ಇ-ಮತದಾನದ ಮೂಲಕ ಚಲಾಯಿಸುವ ವಿಧಾನವನ್ನು ಇಜಿಎಂ ನೋಟಿಸ್‌ನಲ್ಲಿ ಒದಗಿಸಲಾಗುವುದು. ಕಾಯ್ದೆಯ ಸೆಕ್ಷನ್ 103ರ ಅಡಿಯಲ್ಲಿ ವಿಸಿ/ಓವಿಎಎಂ ಸೌಲಭ್ಯದ ಮೂಲಕ ಪಾಲ್ಗೊಳ್ಳುವ ಸದಸ್ಯರನ್ನು ಕೋರಂಗೆ ಪರಿಗಣಿಸಲಾಗುತ್ತದೆ. ಮೇಲೆ ಹೇಳಿದ ದಾಖಲೆಗಳು ಕಂಪನಿಯ ವೆಬ್‌ಸೈಟ್‌ನಲ್ಲಿ (www.ghvinfra.com)ನಲ್ಲಿ ಲಭ್ಯವಿರುತ್ತದೆ.

ಎಂಸಿಎ ಸುತ್ತೋಲೆಗಳು ಮತ್ತು ಸೆಬಿ ಸುತ್ತೋಲೆ ಅನುಸಾರ ಇಜಿಎಂ ನೋಟಿಸ್‌ನ ಭೌತಿಕ ಪ್ರತಿಗಳನ್ನು ಯಾವ ಷೇರುದಾರರಿಗೂ ಕಳುಹಿಸಲಾಗುತ್ತಿಲ್ಲ.

ಇ-ಮೇಲ್ ವಿಳಾಸಗಳನ್ನು ನೋಂದಾಯಿಸುವ ಮತ್ತು ಪರಿಷ್ಕರಿಸುವ ವಿಧಾನ

ಎ). ಭೌತಿಕ ವಿಧಾನದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು cs@ghvinfra.com ಗೆ ಅಗತ್ಯ ದಾಖಲೆಗಳಾದ ಫೋಲಿಯೊ ನಂಬರ್, ಸದಸ್ಯರ ಹೆಸರು ಮತ್ತು ಸ್ವಯಂ ದೃಢೀಕೃತ ಸ್ಕ್ಯಾನ್ ಮಾಡಲಾದ ಪಾನ್ ಕಾರ್ಡ್ ಕಾಪಿ ಅಥವಾ ಆಧಾರ್ ಕಾರ್ಡ್ ಪ್ರತಿಯ ಜತೆಗೆ ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸಿಕೊಳ್ಳಲು ಇ-ಮೇಲ್ ಮಾಡಬಹುದು.

ಬಿ). ಡಿಮ್ಯಾಟ್ ವಿಧಾನದಲ್ಲಿ ತಮ್ಮ ಷೇರುಗಳನ್ನು ಹೊಂದಿರುವವರು ತಮ್ಮ ಆಯಾ ಡಿಪಾಸಿಟರಿ ಪಾರ್ಟಿಸಿಪೆಂಟ್ ಅವರನ್ನು, ತಮ್ಮ ಇ-ಮೇಲ್ ವಿಳಾಸ ನೋಂದಾಯಿಸಿಕೊಳ್ಳಲು ಸಂಪರ್ಕಿಸಬಹುದಾಗಿದೆ. ರಿಮೋಟ್ ಇ-ಮತದಾನ ಮತ್ತು ಇಜಿಎಂ ನಡೆಯುವ ವೇಳೆ ಇ-ಮತದಾನದ ವಿಧಾನ ಈ ಕೆಳಗಿನಂತಿದೆ:

ಕಂಪನಿಯು ತಮ್ಮ ಎಲ್ಲ ಷೇರುದಾರರಿಗೆ ಇಜಿಎಂ ನೋಟಿಸ್‌ನಲ್ಲಿ ನಿಗದಿಪಡಿಸಲಾದ ಎಲ್ಲ ನಿರ್ಣಯಗಳ ಮೇಲೆ ತಮ್ಮ ಮತಗಳನ್ನು ಚಲಾಯಿಸಲು ಅನುಕೂಲವಾಗುವಂತೆ ಇ-ಮತದಾನ ಸೌಲಭ್ಯ (ರಿಮೋಟ್ ಇ-ಮತದಾನ)ವನ್ನು ಕಲ್ಪಿಸಿದೆ. ಹೆಚ್ಚುವರಿಯಾಗಿ ಕಂಪನಿಯು ಇಜಿಎಂ ನಡೆಯುವ ವೇಳೆ ಮತ ಚಲಾಯಿಸಲು ಇ-ಮತದಾನ ವ್ಯವಸ್ಥೆಯನ್ನು ಕಲ್ಪಿಸಿದೆ. ಎಲೆಕ್ಟ್ರಾನಿಕ್ ವಿಧಾನ/ ಭೌತಿಕ ವಿಧಾನದ ಮೂಲಕ ಷೇರುದಾರರು ರಿಮೋಟ್ ಇ-ಮತದಾನ ಮತ್ತು ಇಜಿಎಂ ನಡೆಯುವ ವೇಳೆ -ಮತದಾನ ಮಾಡುವ ವಿಧಾನವನ್ನು ಇಜಿಎಂ ನೋಟಿಸ್‌ನಲ್ಲಿ ನೀಡಲಾಗಿದೆ.

ಜಿಎಚ್‌ವಿ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್ ಪರವಾಗಿ
(ಈ ಮೊದಲು ಸಿಂಧು ವ್ಯಾಲಿ ಟೆಕ್ನಾಲಜೀಸ್ ಲಿಮಿಟೆಡ್ ಎಂದು ಕರೆಯಲ್ಪಡುತ್ತಿತ್ತು)
ಸ್ಥಳ: ಮುಂಬೈ ಸಹಿ/-ಅಜಯ್ ಹನ್ಸ್
ದಿನಾಂಕ: 02.06.2025 ವ್ಯವಸ್ಥಾಪಕ ನಿರ್ದೇಶಕರು
DIN: - 00391261

ಜಿಗಣಿ ಪುರಸಭಾ ಕಾರ್ಯಾಲಯ
ಜಿಗಣಿ ಹೋಬಳಿ, ಜಿಗಣಿ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ - 560 105
ದೂರವಾಣಿ :080-29760400 Email-itstaff_ulb_jigani@yahoo.com, jiganideo@gmail.com

ಕ್ರ.ಸಂ: ಜಿ.ಪು.ಕಾ/ತಾಂ.ಶಾ/ಟೆಂ.ಪ್ರ/09/2025-26 ದಿನಾಂಕ: 30.05.2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
(Through GOK KPP Portal
(https://kppp.karnataka.gov.inonly)

ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ಪುರಸಭಾ ನಿಧಿಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು Kpp-Portal ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು Kpp portal websiteನಲ್ಲಿ ಮಾಹಿತಿಯನ್ನು ಪಡೆದು ಭಾಗವಹಿಸಬಹುದಾಗಿರುತ್ತದೆ.

Sl No	Indent No
01	DMA/2025-26/OW/WORK_INDENT40797
02	DMA/2025-26/OW/WORK_INDENT40798
03	DMA/2025-26/WS/WORK_INDENT40799
04	DMA/2025-26/WS/WORK_INDENT40800

1. ಕಾಮಗಾರಿಗಳ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16.06.2025. 16:00 ಘಂಟೆಗೆ
2. ಟೆಂಡರ್‌ನ್ನು ತೆರೆಯುವ ದಿನಾಂಕ: 17.06.2025 ಸಮಯ 16:30 ಘಂಟೆ ನಂತರ ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
3. ದೂರವಾಣಿ ಸಂಖ್ಯೆ: 080-29760400 ಇಮೇಲ್:itstaff_ulb_jigani@yahoo.com
4. ಪುರಸಭೆಯ ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಗಳ ಬಿಲ್ಲನ್ನು ಪಾವತಿಸಲಾಗುವುದು.

ಸಹಿ/- ಅಧ್ಯಕ್ಷರು, ಪುರಸಭೆ ಜಿಗಣಿ
ಸಹಿ/- ಮುಖ್ಯಾಧಿಕಾರಿ, ಪುರಸಭೆ ಜಿಗಣಿ

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು.
Ph.No.0816-2955247, e-mail:ka.tumakuru.dudc@gmail.com

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಡಿ.ಯು.ಡಿ.ಸಿ, ತುಮಕೂರು ರವರಿಂದ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಟೆಂಡರ್ ಕರೆಯಲಾಗಿದೆ. (ರೂ.ಲಕ್ಷಗಳಲ್ಲಿ) ಇಂಡೆಂಟ್ ನಂ : DMA/2025-26/IND4910DMA/2025-26/IND4903DMA/2025-26/IND4901DMA/2025-26/IND4897DMA/2025-26/IND4896DMA/2025-26/IND4891DMA/2024-25/EL/WORK_INDENT 35622. ದಿನಾಂಕ ಮತ್ತು ಅವಧಿ : 29.05.2025 ರಿಂದ 14.06.2025 ರವರೆಗೆ ಸಮಯ: 17:30 ಗಂಟೆ. DMA/2025-26/IND4914. ದಿನಾಂಕ ಮತ್ತು ಅವಧಿ : 30.05.2025 ರಿಂದ 14.06.2025 ರವರೆಗೆ, ಸ್ವೀಕರಿಸುವ ಕೊನೆಯ ದಿನಾಂಕ & ಅವಧಿ : 14.06.2025 ರವರೆಗೆ ಸಮಯ: 17:30 ಗಂಟೆ. ಬಿಡ್ ತೆರೆಯುವ ದಿನಾಂಕ & ಅವಧಿ : 16.06.2025 ರ ಸಮಯ: 17:30 ಗಂಟೆಗೆ. ಬಿಡ್‌ದಾರರು ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ ದಿನಾಂಕಗಳು & ಟೆಂಡರ್ ದಸ್ತಾವೇಜಿನ ತಿದ್ದುಪಡಿ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸುತ್ತದೆ. ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಜಿಲ್ಲೆ.
DIPR/TUM122/KSMCA/2025-26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು-560011.

ಸಂಖ್ಯೆ: ಕಾಇಂ/ಸನೀ/ಸ.ಇಂ-1 & 5/ಟೆಂಡರು ಪ್ರಕಟಣೆ ಸಂ.04/2025-26 ದಿನಾಂಕ: 02.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ: 4711-ಪ್ರವಾಹ ನಿಯಂತ್ರಣ, ಗಿರಿಜನ ಉಪಯೋಜನೆ ಮತ್ತು ವಿಶೇಷ ಘಟಕ ಕಾಮಗಾರಿಗಳು ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡ ಕಾಮಗಾರಿಗಳಿಗೆ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-1 ಮತ್ತು KW-4 ಮುಖಾಂತರ ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ, ಪ್ರವರ್ಗ I ಗುತ್ತಿಗೆದಾರರು, ಪ್ರವರ್ಗ II(ಎ) ಗುತ್ತಿಗೆದಾರರು & ಸಾಮಾನ್ಯ (ಜನರಲ್) ಗುತ್ತಿಗೆದಾರರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಕೆಪಿಪಿಪಿ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

ಕಾಮಗಾರಿಯ ಹೆಸರು :- ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಚನ್ನಪಟ್ಟಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕುಗಳಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿ, ಕೆರೆಯ ಕೋಡಿ ನಾಲೆಗೆ ತಡೆಗೋಡೆ ನಿರ್ಮಾಣ ಕಾಮಗಾರಿಗಳು ಒಳಗೊಂಡಂತೆ **ಒಟ್ಟು 11 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.5.07 (ಕನಿಷ್ಠ) & ರೂ.240.15 (ಗರಿಷ್ಠ)** ಇಎಂಡಿ: **ರೂ.6400/- (ಕನಿಷ್ಠ) & ರೂ.360500/- (ಗರಿಷ್ಠ).**

ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 02 ರಿಂದ 09 ತಿಂಗಳು ಮಳೆಗಾಲ ಸೇರಿದಂತೆ.

(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)

(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **02.06.2025 ಸಂಜೆ 16.00** ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **09.06.2025 ಸಂಜೆ 15.00** ಗಂಟೆಯವರೆಗೆ. (3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **09.06.2025 ಸಂಜೆ 16.30** ಗಂಟೆಯವರೆಗೆ. (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **10.06.2025 ಸಂಜೆ 16.35** ಗಂಟೆಯವರೆಗೆ. (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**

ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಟ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ- 1 & 4 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ
ವಾಸಾಸಂಇ/ವಾ.ಪ್ರ/1010/ಎಸ್‌ಎಸ್‌ಸಿ/2025-26